ವಾಸನೆಯೂ ಬಡೆದಿರಲಿಲ್ಲ. ತಂಗಿಗೂ ಹೇಳಿರಲಿಲ್ಲ. ಇಂಗ್ಲೆಂಡಿಗೆ ಹೋಗುತ್ತೇನೆ ಅಂದಾಗ ಅಪ್ಪ ಅಮ್ಮ ರಂಪ ಮಾಡಿದ್ದರು. ಆದರೆ, ಪಿ.ಜಿ. ಮಾಡುತ್ತಿರುವಾಗಿನಿಂದಲೇ ತಿಂಗಳೂ ತಿಂಗಳೂ ಮನೆಗೆ ದುಡ್ಡು ಕಳಿಸುತ್ತಿದ್ದುದರಿಂದ ಹೆಚ್ಚೇನೂ ತೊಂದರೆಯಾಗಿರಲಿಲ್ಲ. ಇಂಗ್ಲೆಂಡಿಗೆ ಬರುವಾಗ ಜಗಜೀತಸಿಂಗನ ಅಷ್ಟೂ ಕ್ಯಾಸೆಟ್ಟುಗಳನ್ನೂ ತಂದಿದ್ದರು. ಜಸ್ಸಿಗೆ ಲಂಡನ್ನಿನಿಂದ ಹತ್ತಿರವಿರುವ ಮೇಡ್‌ಸ್ಟೋನ್‌ನಲ್ಲಿ ಸುಲಭದಲ್ಲಿ ಕೆಲಸ ಸಿಕ್ಕಿತು; ಪ್ರಾಣೇಶನಿಗೆ ಸಂಬಳವಿಲ್ಲದೇ ಅನುಭವಕ್ಕಾಗಿ ದುಡಿಯುವ ಅಟ್ಯಾಚ್‌ಮೆಂಟ್ ಮಾತ್ರ ಸಿಕ್ಕಿತು. ಜಸ್ಸಿ ಕೆಲಸ ಶುರು ಮಾಡಿದಳು. ಪ್ರಾಣೇಶ ಅಡುಗೆ ಮಾಡುವುದು, ಮನೆಯನ್ನು ಸ್ವಚ್ಛಗೊಳಿಸುವುದು ಮಾಡಿಕೊಂಡು, ದಿನಕ್ಕೆ ಹತ್ತಾರು ಅಪ್ಲಿಕೇಷನ್ ಹಾಕುತ್ತಿದ್ದ. ಜಸ್ಸಿ ಮನೆಗೆ ಬಂದ ಮೇಲೆ ತಾನಿವತ್ತು ಏನು ಕಲಿತೆ, ಏನೇನೆಲ್ಲ ಮಾಡಿದೆ, ಯಾರು ಯಾರು ಪರಿಚಯವಾದರು ಎಂದು ಹೇಳುತ್ತಿದ್ದಳು. ಮೊದಮೊದಲು ಖುಷಿಯಿಂದಲೇ ಕೇಳಿಸಿಕೊಳ್ಳುತ್ತಿದ್ದ. ಬರಬರುತ್ತ ಕಿರಿಕಿರಿಯಾಗತೊಡಗಿತು.

ಒಂದು ವೀಕೆಂಡ್ ರೋಮ್ಯಾನ್ಸ್ ಎಲ್ಲ ಮುಗಿದ ಮೇಲೆ ಸಂಜೆ ಇಬ್ಬರೂ ಕುಡಿಯುತ್ತ ಕೂತಾಗ ಜಸ್ಸಿ, "ಎಷ್ಟು ದಿನ ಅಂತ ಹೀಗೆ ಇರುವುದು? ಬೇಗ ಮದುವೆಯಾಗಿ ಬಿಡೋಣ. ನನಗೊಂದು ಮಗು ಬೇಕು. ವಯಸ್ಸು ಹೋಗುತ್ತೆ, ಬರುವುದಿಲ್ಲ. ನಮ್ಮ ಮನೆಯಲ್ಲಿ ಯಾವಾಗಿನಿಂದ ಒತ್ತಾಯ ಮಾಡುತ್ತಿದ್ದಾರೆ ಎಂದು ನಿನಗೂ ಗೊತ್ತೇ ಇದೆ" ಎಂದಳು. "ನನಗಿನ್ನೂ ಕೆಲಸ ಸಿಕ್ಕಿಲ್ಲ, ಸಿಕ್ಕ ಮೇಲೆ ಯೋಚಿಸೋಣ" ಎಂದ. "ಯಾಕೆ ಈಗ ಬರುವ ದುಡ್ಡು ಇಬ್ಬರಿಗೂ ಸಾಲುತ್ತದಲ್ಲ" ಎಂದಳು. "ನಿನ್ನ ದುಡ್ಡಿನ ಭಿಕ್ಷೆ ನನಗೆ ಬೇಡ" ಎಂದ. "ನಿನ್ನ ಅಪ್ಪನ ಮನೆ ನಡೆಸಲು ಮತ್ತು ನಿನ್ನ ತಂಗಿಯ ಶಿಕ್ಷಣಕ್ಕೆ ದುಡ್ಡು ಕಳಿಸುತ್ತಿರುವುದು ನಾನು, ನೆನಪಿರಲಿ" ಎಂದಳು. ಮಾತು ಎಲ್ಲಿಂದ ಎಲ್ಲಿಗೊ ಬೆಳೆಯಿತು. ಪ್ರೀತಿಗಿಂತ ಜಗಳಗಳು ಜಾಸ್ತಿಯಾಗತೊಡಗಿದವು.

ಕೊನೆಗೂ ಪ್ರಾಣೇಶನಿಗೆ ಕೆಲಸಕ್ಕೆ ಕರೆ ಬಂತು, ಸ್ಕಾಟ್‌ಲ್ಯಾಂಡಿನ ಇನ್‌ವರ್‌ನೆಸ್ ಎಂಬ ದೂರದ ಊರಿನಲ್ಲಿ. ಮೊದಲ ಅವಕಾಶವನ್ನು ಕಳೆದುಕೊಳ್ಳುವಂತಿರಲಿಲ್ಲ. ಪ್ರಾಣೇಶ ಹೊಸ ಊರು, ಹೊಸ ಆರೋಗ್ಯ ವ್ಯವಸ್ಥೆ, ಹೊಸ ಕೆಲಸಗಳಲ್ಲಿ ಬ್ಯುಸಿ ಆದ. ದಿನಾ ಫೋನಿನಲ್ಲಿ ಮಾತಾಡುತ್ತಿದ್ದರು. ಮೂರು ನಾಲ್ಕು ತಿಂಗಳಿಗೊಮ್ಮೆ ಭೇಟಿಯಾಗುತ್ತಿದ್ದರು. ಕೆಲಸದ ಒತ್ತಡ ಮತ್ತು ಉನ್ನತ ಪರೀಕ್ಷೆಗಳ ತಯಾರಿ ಇಬ್ಬರ ಸಮಯವನ್ನೂ ತಿನ್ನುತ್ತಿದ್ದವು. ಫೋನ್ ಕಾಲುಗಳು, ಪರಸ್ಪರ ಭೇಟಿಗಳು ಕಡಿಮೆಯಾದವು. ಪ್ರಾಣೇಶ ಉನ್ನತ ಪರೀಕ್ಷೆಯಲ್ಲಿ ನಪಾಸಾದ, ಜಸ್ಸಿ ಪಾಸಾದಳು. ಒಂದು ದಿನ ಫೋನಿನಲ್ಲಿ ಮಾತು ಎಲ್ಲಿಂದ ಎಲ್ಲಿಗೋ ಹೋಗಿ ಸಂಬಂಧ ಮುರಿದುಬಿತ್ತು.

ರಜೆಗೆ ಬಾಗಲಕೋಟೆಗೆ ಹೋದಾಗ ಅಪ್ಪ ಅಮ್ಮ ನೋಡಿದ ಪದ್ಮಜಾಳನ್ನು ಮದುವೆ ಮಾಡಿಕೊಂಡು ಬಂದಿದ್ದ. ನಿಧಾನವಾಗಿ ಜಸ್ಸಿ ಭೂತಕಾಲವನ್ನು ಸೇರಿದ್ದಳು. ಅವಳು ಈಗ ಇಂಗ್ಲೆಂಡಿನ ಯಾವ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಾಳೆ ಎನ್ನುವುದು ಅಸ್ಪಷ್ಟವಾಗಿ ಗೊತ್ತಿತ್ತು. ಆದರೆ, ಪ್ರಾಣೇಶ ಜಸ್ಸಿಯನ್ನು ಪ್ರಜ್ಞಾಪೂರ್ವಕವಾಗಿ ನೆನಪಿಸಿಕೊಂಡು ಕನವರಿಸಿದ್ದೇ ಇಲ್ಲ. 'ಪಿ. ಜಿ.ಐ ಚಂಡೀಗಡ ಆಸ್ಪತ್ರೆ'ಯ ವಾಟ್ಸ್‌ಆ್ಯಪ್ ಗುಂಪಿನಲ್ಲಿ ಜಸ್ಸಿ ಇರುವುದು ಗೊತ್ತಿದ್ದರೂ ಅವಳನ್ನು ವೈಯಕ್ತಿಕವಾಗಿ ಸಂಪರ್ಕಿಸಬೇಕು ಎಂದು ಯಾವತ್ತೂ ಅನಿಸಿರಲೇ ಇಲ್ಲ. ಅವಳಿಂದಲೂ ಯಾವತ್ತೂ ವೈಯಕ್ತಿಕ ಮೆಸೇಜುಗಳಾಗಲಿ ಕರೆಗಳಾಗಲಿ ಬಂದಿರಲಿಲ್ಲ.

ಆದರೆ, ನಿನ್ನೆ ಮಗ ಹೋದ ಮೇಲೆ ಜಸ್ಸಿ ಅದೆಷ್ಟು ನೆನಪಾದಳು! ಅವಳ ಮಾತು, ನಗೆ, ಹಾಡು, ಪ್ರೀತಿ, ಪ್ರಣಯಗಳು ಯಾಕೆ ನೆನಪಾದವು? ತಮ್ಮ ಸಂಬಂಧ ಮುರಿದದ್ದಾದರೂ ಏಕೆ ಎಂದು ರಾತ್ರಿಯಿಡೀ ಕುಡಿಯುತ್ತ ಉತ್ತರಗಳನ್ನು ಹುಡುಕುತ್ತಿದ್ದ. ಅವಳು ಉತ್ತರ ಧ್ರುವ, ತಾನು ದಕ್ಷಿಣ ಧ್ರುವ ಎನ್ನುವ ಕಂದರವೇ? ಆಗ ಕರಿಯರ್‌ನಲ್ಲಿ ತನಗಿಂತ ಮುಂದೆ ಹೋದಳು ಎನ್ನುವ ಅವಳ ಸೊಕ್ಕೇ